# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಸಾಮಾನ್ಯ ಭವಿಷ್ಯ ನಿಧಿ ಖಾತೆಯಿಂದ ಮುಂಗಡ ಮತ್ತು ಅಂಶಿಕ ಅಂತಿಮ ಹಣ ವಾಪಸಾತಿ ಸಂಬಂಧ ಅಧಿಕಾರ ಪ್ರತ್ಯಾಯೋಜನೆ ಬಗ್ಗೆ.

ಓದಲಾಗಿದೆ:
1. ಸರ್ಕಾರಿ ಆದೇಶ ಸಂಖ್ಯೆ: ಆಇ 34 ಮುಭನಿ 2000, ದಿನಾಂಕ:20.10.2000.
2. ಸರ್ಕಾರಿ ಆದೇಶ ಸಂಖ್ಯೆ: ಆಇ 23 ಮುಭನಿ 2013, ದಿನಾಂಕ:25.3.2014.
3. ಮಹಾಲೇಖಪಾಲರ ಪತ್ರ ಸಂಖ್ಯೆ:ಎಫ್‌ಎಂ(ಸಿ)/ಜಿ1/2014-15/26, ದಿನಾಂಕ: 5.5.2014.

**ಪ್ರಸ್ತಾವನೆ:-**

ರಾಜ್ಯ ಸರ್ಕಾರಿ ನೌಕರರು ಸಾಮಾನ್ಯ ಭವಿಷ್ಯ ನಿಧಿ ಖಾತೆಯಿಂದ ಮುಂಗಡ/ಅಂಶಿಕ ಅಂತಿಮ ಹಣ ವಾಪಸಾತಿ ಸಂಬಂಧ ಮೇಲೆ ಕ್ರ.ಸಂ. (1) ರಲ್ಲಿ ಓದಲಾದ ಸರ್ಕಾರಿ ಆದೇಶದಲ್ಲಿನ ಅಧಿಕಾರ ಪ್ರತ್ಯಾಯೋಜನೆ ಮಿತಿಯನ್ನು ಪರಿಷ್ಕರಿಸಬೇಕೆಂದು ಇಲಾಖೆಗಳಿಂದ ಬೇಡಿಕೆ ಬಂದ ಹಿನ್ನೆಲೆಯಲ್ಲಿ, ಮೇಲೆ ಕ್ರ.ಸಂ. (2)ರಲ್ಲಿ ಓದಲಾದ ಸರ್ಕಾರಿ ಆದೇಶದಲ್ಲಿ ಪರಿಷ್ಕೃತ ಅಧಿಕಾರ ಪ್ರತ್ಯಾಯೋಜನೆಯನ್ನು ಹೊರಡಿಸಲಾಗಿತ್ತು. ಮಹಾಲೇಖಪಾಲರು ಮೇಲೆ ಕ್ರ.ಸಂ.(3) ರಲ್ಲಿ ಓದಲಾದ ಪತ್ರದಲ್ಲಿ, ಸರ್ಕಾರದ ದಿನಾಂಕ:25.03.2014ರ ಆದೇಶದಲ್ಲಿ ತಾತ್ಕಾಲಿಕ ಮುಂಗಡ ಮಂಜೂರಾತಿ ಅಧಿಕಾರ ಪ್ರತ್ಯಾಯೋಜನೆಯಲ್ಲಿ ಜಂಟಿ ನಿರ್ದೇಶಕರು/ ನಿಯಂತ್ರಣಾಧಿಕಾರಿಗಳು ಹಾಗೂ ಜಿಲ್ಲಾ ಮಟ್ಟದ ಮತ್ತಿತರ ಅಧಿಕಾರಿಗಳು ಮಂಜೂರು ಮಾಡಬಹುದಾದ ಮೊತ್ತ ಕ್ರಮವಾಗಿ 2,00,000/- ಮತ್ತು 1,00,000/- ಬದಲಿಗೆ ಶೇಕಡವಾರು ಮಿತಿಯನ್ನು ನಿಗದಿಪಡಿಸುವುದು ಸೂಕ್ತವೆಂದು ಅಭಿಪ್ರಾಯಪಟ್ಟಿರುತ್ತಾರೆ. ಮಹಾಲೇಖಪಾಲರ ಸಲಹೆಯಂತೆ ಈ ಆದೇಶವನ್ನು ತಿದ್ದುಪಡಿ ಮಾಡುವುದು ಸೂಕ್ತವೆಂದು ಸರ್ಕಾರ ಭಾವಿಸಿದೆ. ಆದುದರಿಂದ, ಮೇಲೆ ಕ್ರ.ಸಂ.(2)ರಲ್ಲಿ ಓದಲಾದ ದಿನಾಂಕ:25.03.2014ರ ಸರ್ಕಾರಿ ಆದೇಶವನ್ನು ಹಿಂಪಡೆದು, ವಿವಿಧ ಹಂತದ ಇಲಾಖಾ ಅಧಿಕಾರಿಗಳಿಗೆ ಅಧಿಕಾರ ಪ್ರತ್ಯಾಯೋಜನೆಯನ್ನು ಮರುಪರಿಷ್ಕರಿಸಲು ನಿರ್ಧರಿಸಿ ಸರ್ಕಾರ ಮುಂದಿನಂತೆ ಆದೇಶಿಸುತ್ತದೆ.

**ಸರ್ಕಾರಿ ಆದೇಶ ಸಂಖ್ಯೆ: ಆಇ 23 ಮುಭನಿ 2013, ಬೆಂಗಳೂರು, ದಿನಾಂಕ: 03.06.2014**

ಸಾಮಾನ್ಯ ಭವಿಷ್ಯ ನಿಧಿ ಖಾತೆಯಿಂದ ಮುಂಗಡ ಮತ್ತು ಅಂಶಿಕ ಅಂತಿಮ ಹಣ ವಾಪಸಾತಿ ಸಂಬಂಧ ವಿವಿಧ ಹಂತದ ಇಲಾಖಾ ಅಧಿಕಾರಿಗಳಿಗೆ ಅಧಿಕಾರ ಪ್ರತ್ಯಾಯೋಜನೆಯನ್ನು ತಕ್ಷಣದಿಂದ ಜಾರಿಗೆ ಬರುವಂತೆ ಕೆಳಕಂಡಂತೆ ಮರುಪರಿಷ್ಕರಿಸಿದೆ.

I) **ತಾತ್ಕಾಲಿಕ ಮುಂಗಡ:** ಕರ್ನಾಟಕ ಸಾಮಾನ್ಯ ಭವಿಷ್ಯ ನಿಧಿ ನಿಯಮಗಳು 1957ರ ನಿಯಮ 15, 15-A ಮತ್ತು ನಿಯಮ 16ರನ್ವಯ (ಸರ್ಕಾರದ ಆದೇಶ ಸಂಖ್ಯೆ:ಆಇ 48 ಮಕಮು 1994, ದಿ:21.10.1994ರಲ್ಲಿ ಮನೆಗೆ ಕೊಂಡೊಯ್ಯುವ ವೇತನದ [Take Home Salary] ಬಗ್ಗೆ ಸೂಚಿಸಿರುವ ಮಿತಿಯಂತೆ ಹಾಗೂ ಕರ್ನಾಟಕ ಸಾಮಾನ್ಯ ಭವಿಷ್ಯ ನಿಧಿ ನಿಯಮಗಳು 1957ರ ನಿಯಮ 16ರನ್ವಯ ಮರುಸಂದಾಯ ಅವಧಿಯನ್ನು ಚಂದಾದಾರನ ಲಭ್ಯವಿರುವ ಸೇವಾ ಅವಧಿಗನುಸಾರ ನಿಗದಿಪಡಿಸುವ ಷರತ್ತಿಗೆ ಒಳಪಡತಕ್ಕದ್ದು.)

| ಕ್ರ.ಸಂ. | ಹಂತ | ಅಧಿಕಾರ ಪ್ರತ್ಯಾಯೋಜನೆ |
|---|---|---|
| 1 | ಇಲಾಖಾ ಮುಖ್ಯಸ್ಥರು | ಸಾಮಾನ್ಯ ಮತ್ತು ವಿಶೇಷ ಕಾರಣಕ್ಕಾಗಿ, ಪ್ರತಿಯೊಂದು ಪ್ರಕರಣದಲ್ಲಿ ಮಂಜೂರು ಮಾಡುವ ದಿನಾಂಕದಂದು ಭವಿಷ್ಯ ನಿಧಿ ಖಾತೆಯಲ್ಲಿ ಜಮೆಯಾಗಿರುವ ಮೊತ್ತದ ಗರಿಷ್ಠ ಶೇ.80ರಷ್ಟು ಮುಂಗಡ ಮಂಜೂರು ಮಾಡಬಹುದು. |
| 2 | ಜಂಟಿ ನಿರ್ದೇಶಕರು/ ನಿಯಂತ್ರಣಾಧಿಕಾರಿಗಳು | ಸಾಮಾನ್ಯ ಮತ್ತು ವಿಶೇಷ ಕಾರಣಕ್ಕಾಗಿ, ಪ್ರತಿಯೊಂದು ಪ್ರಕರಣದಲ್ಲಿ ಮಂಜೂರು ಮಾಡುವ ದಿನಾಂಕದಂದು ಭವಿಷ್ಯ ನಿಧಿ ಖಾತೆಯಲ್ಲಿ ಜಮೆಯಾಗಿರುವ ಮೊತ್ತದ ಗರಿಷ್ಠ ಶೇ.75ರಷ್ಟು ಒಟ್ಟಾರೆ ಸೇವೆಯಲ್ಲಿ 3 ಬಾರಿ ಮುಂಗಡ ಮಂಜೂರು ಮಾಡಬಹುದು. |
| 3 | ಜಿಲ್ಲಾ ಮಟ್ಟದ ಮತ್ತಿತರ ಅಧಿಕಾರಿಗಳು | ಸಾಮಾನ್ಯ ಮತ್ತು ವಿಶೇಷ ಕಾರಣಕ್ಕಾಗಿ, ಪ್ರತಿಯೊಂದು ಪ್ರಕರಣದಲ್ಲಿ ಮಂಜೂರು ಮಾಡುವ ದಿನಾಂಕದಂದು ಭವಿಷ್ಯ ನಿಧಿ ಖಾತೆಯಲ್ಲಿ ಜಮೆಯಾಗಿರುವ ಮೊತ್ತದ ಗರಿಷ್ಠ ಶೇ.70ರಷ್ಟು ಒಟ್ಟಾರೆ ಸೇವೆಯಲ್ಲಿ 3 ಬಾರಿ ಮುಂಗಡ ಮಂಜೂರು ಮಾಡಬಹುದು. |

... 2

II) ಅಂಶಿಕ ಅಂತಿಮ ಹಣ ವಾಪಸಾತಿ: ಕರ್ನಾಟಕ ಸಾಮಾನ್ಯ ಭವಿಷ್ಯ ನಿಧಿ ನಿಯಮಗಳು 1957ರ ನಿಯಮ 27–Bರನ್ವಯ:

| ಕ್ರ.ಸಂ. | ಹಂತ | ಅಧಿಕಾರ ಪ್ರತ್ಯಾಯೋಜನೆ |
|---|---|---|
| 1 | ಇಲಾಖಾ ಮುಖ್ಯಸ್ಥರು | ಪ್ರತಿಯೊಂದು ಪ್ರಕರಣದಲ್ಲಿ ಮಂಜೂರು ಮಾಡುವ ದಿನಾಂಕದಂದು ಭವಿಷ್ಯ ನಿಧಿ ಖಾತೆಯಲ್ಲಿ ಜಮೆಯಾಗಿರುವ ಮೊತ್ತದ ಶೇ.90ರಷ್ಟು ಮಂಜೂರು ಮಾಡಬಹುದು. |
| 2 | ಜಂಟಿ ನಿರ್ದೇಶಕರು/ ನಿಯಂತ್ರಣಾಧಿಕಾರಿಗಳು | ಪ್ರತಿಯೊಂದು ಪ್ರಕರಣದಲ್ಲಿ ಮಂಜೂರು ಮಾಡುವ ದಿನಾಂಕದಂದು ಭವಿಷ್ಯ ನಿಧಿ ಖಾತೆಯಲ್ಲಿ ಜಮೆಯಾಗಿರುವ ಮೊತ್ತದ ಶೇ.80ರಷ್ಟು ಮಂಜೂರು ಮಾಡಬಹುದು. |
| 3 | ಜಿಲ್ಲಾ ಮಟ್ಟದ ಮತ್ತಿತರ ಅಧಿಕಾರಿಗಳು | ಪ್ರತಿಯೊಂದು ಪ್ರಕರಣದಲ್ಲಿ ಮಂಜೂರು ಮಾಡುವ ದಿನಾಂಕದಂದು ಭವಿಷ್ಯ ನಿಧಿ ಖಾತೆಯಲ್ಲಿ ಜಮೆಯಾಗಿರುವ ಮೊತ್ತದ ಶೇ.70ರಷ್ಟು ಮಂಜೂರು ಮಾಡಬಹುದು. |

ಕರ್ನಾಟಕ ಸಾಮಾನ್ಯ ಭವಿಷ್ಯ ನಿಧಿ ನಿಯಮಗಳು, 1957ಕ್ಕೆ ಪ್ರತ್ಯೇಕವಾಗಿ ತಿದ್ದುಪಡಿ ಹೊರಡಿಸಲಾಗುವುದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಎನ್.ಲಕ್ಷ್ಮಣ)
ಸರ್ಕಾರದ ಅಧೀನ ಕಾರ್ಯದರ್ಶಿ,
ಆರ್ಥಿಕ ಇಲಾಖೆ (ಆಡಳಿತ & ಮುಂಗಡ)

ಇವರಿಗೆ:
ಸಂಕಲನಕಾರರು, ಕರ್ನಾಟಕ ರಾಜ್ಯ ಪತ್ರ, ಬೆಂಗಳೂರು–ಮುಂದಿನ ವಾರ ಪತ್ರದಲ್ಲಿ ಪ್ರಕಟಿಸಿ 100 ಪ್ರತಿಗಳನ್ನು ಆರ್ಥಿಕ ಇಲಾಖೆಗೆ (ಮುಂಗಡ ಶಾಖೆ) ಕಳುಹಿಸುವಂತೆ ಕೋರಲಾಗಿದೆ.

ಪ್ರತಿಯನ್ನು:
1. ಮಹಾಲೇಖಪಾಲರು (ಲೆಕ್ಕಪತ್ರ & ತನಿಖೆ), ಕರ್ನಾಟಕ, ಬೆಂಗಳೂರು.
2. ಸರ್ಕಾರದ ಮುಖ್ಯ ಕಾರ್ಯದರ್ಶಿಗಳು/ಎಲ್ಲಾ ಅಪರ ಮುಖ್ಯ ಕಾರ್ಯದರ್ಶಿಗಳು,
3. ಸರ್ಕಾರದ ಎಲ್ಲಾ ಪ್ರಧಾನ ಕಾರ್ಯದರ್ಶಿಗಳು/ಕಾರ್ಯದರ್ಶಿಗಳು.
4. ಎಲ್ಲಾ ಇಲಾಖಾ ಮುಖ್ಯಸ್ಥರುಗಳಿಗೆ.
5. ರಿಜಿಸ್ಟ್ರಾರ್, ಕರ್ನಾಟಕ ಉಚ್ಚ ನ್ಯಾಯಾಲಯ, ಬೆಂಗಳೂರು.
6. ರಿಜಿಸ್ಟ್ರಾರ್, ಕರ್ನಾಟಕ ಆಡಳಿತ ನ್ಯಾಯ ಮಂಡಳಿ, ಬೆಂಗಳೂರು.
7. ಕಾರ್ಯದರ್ಶಿಗಳು, ಕರ್ನಾಟಕ ಲೋಕಸೇವಾ ಆಯೋಗ, ಬೆಂಗಳೂರು.
8. ಕಾರ್ಯದರ್ಶಿಗಳು, ಕರ್ನಾಟಕ ವಿಧಾನ ಸಭೆ/ ವಿಧಾನ ಪರಿಷತ್, ವಿಧಾನ ಸೌಧ, ಬೆಂಗಳೂರು,
9. ಎಲ್ಲಾ ಜಿಲ್ಲಾಧಿಕಾರಿಗಳಿಗೆ/ಎಲ್ಲಾ ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು,
10. ನಿರ್ದೇಶಕರು, ಖಜಾನೆ ಇಲಾಖೆ, ಬೆಂಗಳೂರು.
11. ಅಧ್ಯಕ್ಷರು, ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘ, ಕಬ್ಬನ್ ಉದ್ಯಾನವನ, ಬೆಂಗಳೂರು.
12. ಆರ್ಥಿಕ ಇಲಾಖೆ (ಗಣಕ ಕೋಶ) – ಆರ್ಥಿಕ ಇಲಾಖೆಯ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು.
13. ಕಛೇರಿ ಪ್ರತಿ/ಶಾಖಾರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.

---